ದಿಃ 18.10.2019. ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು. ಮುಂದುವರಿದ ಪಾಟಿ ಸವಾಲುಃ ಅರ್ಜಿದಾರರ ಪರ ಶ್ರೀ ಬಿ ಆರ್ ಪಿ ವಕೀಲರಿಂದ ,

15. ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. 1 ನೇ ಎದುರುದಾರರು ಅಸಲು ದಾವೆ 65/89 ಹಾಕಿದ ಕಾಲದಿಂದಲೂ ನಾನು ಈ ಪ್ರಕರಣದಲ್ಲಿ ಭಾಗಿಯಾಗಿರುತ್ತೇನೆ. ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇದೆ. ಅಸಲುದಾವೆ 65/89 ರಲ್ಲಿ ಆದ ತೀರ್ಪಿನ ನಂತರ ದಾಖಲಾದ ಎಫ್ ಡಿ ಪಿ 6/2009 ರಲ್ಲಿ ಕೂಡಾ ನಾನು ಪಕ್ಷಗಾರಳಾಗಿದ್ದೆ ಎಂದರೆ ಸರಿ . ಎಫ್ ಡಿ ಪಿ 19/1998 ರಲ್ಲಿಯೂ ಕೂಡ ನಾನು ಪಕ್ಷಗಾರಳಾಗಿದ್ದೆ ಎಂದರೆ ಸರಿ . ಸದರಿ ಎಫ್ ಡಿಪಿ 19/1998 ರಲ್ಲಿ ಆದ ಆದೇಶದಂತೆ 1 ನೇ ಎದುರುದಾರರು ಸರ್ವೆ ನಂಃ 75/2 ರಲ್ಲಿ 39 ಗುಂಟೆ ಮತ್ತು ಸರ್ವೆನಂಃ 75/3 ರಲ್ಲಿ 2 ಎಕರೆ 8 ಗುಂಟೆ ಜಮೀನು ಪಡೆದಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ.

16. ನಮ್ಮ ತಂದೆ ಆನೆಪ್ಪ ಇವರು ತಹಶೀಲ್ದಾರ ಆಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ . ನಮ್ಮ ತಂದೆ ಆನೆಪ್ಪ ನಿವೃತ್ತಿ ಹೊಂದಿದ ನಂತರ ನನ್ನ ತಾಯಿಯೊಂದಿಗೆ ಚೆನ್ನಗಿರಿಯಲ್ಲಿ ವಾಸವಿದ್ದರು. ನಮ್ಮ ತಂದೆ ಮೃತರಾದ ನಂತರ ಅವರ ನಿವೃತ್ತಿ ವೇತನ ನನ್ನ ತಾಯಿಗೆ ಬರುತ್ತಿತ್ತು ಎಂದರೆ ಸರಿ. ನಮ್ಮ ತಾಯಿ ತನ್ನ ನಿವೃತ್ತಿ ವೇತನ ಪಡೆಯಲು ನನ್ನನ್ನು ನಾಮ ನಿರ್ದೇಶನ ಗೊಳಿಸಿದ್ದರು ಎಂದರೆ ಸರಿ . ನಾನು ನನ್ನ ತಾಯಿಯ ನಿವೃತ್ತಿ ವೇತನವನ್ನು ಸ್ವೀಕರಿಸುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ತಾಯಿಯನ್ನು ಚೆನ್ನಗಿರಿಯಿಂದ ದಾವಣಗೆರೆಗೆ ಕರೆದುಕೊಂಡು ಹೋಗಿ ನನ್ನೊಂದಿಗೆ ಇಟ್ಟುಕೊಂಡಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಯು ನನ್ನ ತಾಯಿಯೇ ನನ್ನ ಜೊತೆ ಬಂದು ಇದ್ದರು ಎಂದು ಹೇಳುತ್ತಾರೆ. ನನ್ನ ತಾಯಿಯ ಪಿಂಚಣಿ ಪಡೆಯುವ ಉದ್ದೇಶದಿಂದ ಮತ್ತು ನನ್ನ ತಾಯಿಯ ಹಿಸ್ಸೆ ಪಡೆಯುವ ಸಲುವಾಗಿ ಆಕೆಯನ್ನು ನಾನೇ ಕರೆದುಕೊಂಡು ಹೋಗಿದ್ದೆ ಎಂದರೆ ಸರಿಯಲ್ಲ. ನನ್ನ ತಾಯಿಯ

ಪಿಂಚಣಿಯನ್ನು ನಾನೇ ಪಡೆದು ಅದನ್ನು ನನ್ನ ಸಹೋದರರಿಗೆ ಮತ್ತು ಇತರ ಸದಸ್ಯರಿಗೆ ಕೊಡದೇ ನಾನೇ ಉಪಯೋಗಿಸಿರುತ್ತೇನೆ ಎಂದರೆ ಸರಿಯಲ್ಲ.

17. ಎಲ್ಲಾ ದಾವಾ ಆಸ್ತಿಗಳು ಆನೆಪ್ಪ ಇವರ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ನನ್ನ ತಾಯಿಗೆ ಅವರು ತೀರಿಕೊಳ್ಳುವ ಸಮಯದಲ್ಲಿ 86 ವರ್ಷ ವಯಸ್ಸಾಗಿತ್ತು . ನನ್ನ ತಾಯಿ ತೀರಿಕೊಳ್ಳುವ ಕಾಲಕ್ಕೆ ನನ್ನ ಜೊತೆ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ತನ್ನ ಪಾಲಿನ ಆಸ್ತಿಯನ್ನು ನನ್ನ ಹೆಸರಿಗೆ ವಿಲ್ ಮುಖಾಂತರ ಕೊಟ್ಟಿದ್ದಾರೆ. ನನ್ನ ತಾಯಿಗೆ ದಾವಾ ಆಸ್ತಿ ಗಳಿಗೆ ಸಂಬಂಧಿಸಿದಂತೆ ವಿಲ್ ಮಾಡುವ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ತೀರಿಕೊಳ್ಳುವಾಗ ಅವರಿಗೆ 95 ವರ್ಷ ವಯಸ್ಸಾಗಿತ್ತು ಎಂದರೆ ಸರಿಯಲ್ಲ. ವಿಲ್ ನಾಮೆಯಲ್ಲಿ ನನ್ನ ತಾಯಿ ತನ್ನ ವಯಸ್ಸನ್ನು ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿ ತೀರಿಕೊಳ್ಳುವ ಸಮಯದಲ್ಲಿ ತುಂಬಾ ಅಶಕ್ತರಾಗಿದ್ದರು ಮತ್ತು ಓಡಾಡುವ ಸ್ಥಿತಿಯಲ್ಲಿರಲಿಲ್ಲ ಎಂದರೆ ಸರಿಯಲ್ಲ. ತೀರಿಕೊಳ್ಳುವ ಪೂರ್ವದಲ್ಲಿ ನನ್ನ ತಾಯಿ 2 ವರ್ಷಗಳಿಂದ ಹಾಸಿಗೆ ಹಿಡಿದಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿ ತುಂಬಾ ಅಶಕ್ತರಾಗಿದ್ದು ಮತ್ತು ಅವರಿಗೆ ವಯಸ್ಸಾಗಿದ್ದರಿಂದ ಒಂದು ಊರಿನಿಂದ ಮತ್ತೊಂದು ಊರಿಗೆ ಅವರಿಗೆ ಓಡಾಡಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ತಾಯಿ ಬಿದ್ದು ಸೊಂಟ ಮುರಿದುಕೊಂಡಿದ್ದರು ಎಂದರೆ ಸರಿ . ಸಾಕ್ಷಿಯು ಮುಂದುವರಿದು ಆದರೂ ಕೂಡಾ ಅವರು ಓಡಾಡುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ತಾಯಿಗೆ ವಯಸ್ಸಾಗಿದ್ದರಿಂದ ಅವರಿಗೆ ಜ್ಞಾಪಕ ಶಕ್ತಿ ಚೆನ್ನಾಗಿ ಉಳಿದಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಯಾವುದೇ ಸ್ವಂತ ನಿರ್ಧಾರ ತೆಗೆದುಕೊಳ್ಳುವ ಮನೋಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ನನ್ನ ಹೆಸರಿಗೆ ಮಾಡಿರುವ ದಾಖಲೆಯನ್ನು ನನ್ನ ಸಂಬಂಧಿಕರಾದ ಮಾಲತೇಶ ಎನ್ನುವವರು ನನಗೆ ಕೊಟ್ಟಿದ್ದಾರೆ. ನೊಂದಣಾಧಿಕಾರ ಕಛೇರಿಯಲ್ಲಿ ಕೆಲಸ ಮಾಡುವ ರಂಗಪ್ಪ ಎನ್ನುವವರು ಆ

ದಾಖಲೆಯನ್ನು ಮಾಲತೇಶನಿಗೆ ಕೊಟ್ಟಿದ್ದರು . ರಂಗಪ್ಪ ಮತ್ತು ಮಾಲತೇಶ ನನಗೆ ಸಂಬಂಧಿಕರಲ್ಲ. ಅವರು ನನಗೆ ಪರಿಚಯಸ್ಥರು ಎಂದು ಹೇಳುತ್ತಾರೆ. ನಾನು ವಿಲ್ ನಾಮೆಯನ್ನು ಓದಿದ್ದೇನೆ. ನ್ಯಾಯಾಲಯವು ನನ್ನ ತಾಯಿಗೆ ಆಸ್ತಿಗಳಲ್ಲಿ ನಿರ್ಧಿಷ್ಟ ಭಾಗ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಗೆ ವಿಲ್ ನಾಮೆ ಮಾಡುವ ಯಾವ ಉದ್ದೇಶವೂ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಇತರ ಕುಟುಂಬದ ಸದಸ್ಯರು ಸೇರಿಕೊಂಡು ಇಂತಹ ದಾಖಲೆ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ವಿಲ್ ನಾಮೆ ಬರೆಯಲು ಹಾಗೂ ಅದರಲ್ಲಿ ಬರೆದ ಆಸ್ತಿಗಳ ವಿವರಗಳ ಬಗ್ಗೆ ಬರೆಯಲು ಯಾರು ಮಾಹಿತಿ ಕೊಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ಆ ವಿಲ್ ನಾಮೆಯನ್ನು ಬರೆಸಲು ನಾನೇ ಮಾಹಿತಿ ಕೊಟ್ಟಿದ್ದೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ಎಲ್ಲಾ ಮಕ್ಕಳ ಮೇಲೆ ಸಮನಾದ ಪ್ರೀತಿ , ವಿಶ್ವಾಸ ಇತ್ತು ಎಂದರೆ ಸರಿಯಲ್ಲ. ನನ್ನ ತಾಯಿಗೆ ನನ್ನ ಮೇಲೆ ಮಾತ್ರ ತುಂಬಾ ವಿಶ್ವಾಸ ಇತ್ತು . ನನ್ನ ತಾಯಿಗೆ ತನ್ನ ಪಾಲನ್ನು ಎಲ್ಲಾ ಮಕ್ಕಳಿಗೂ ಸಮನಾಗಿ ಹಂಚುವ ಉದ್ದೇಶ ಇತ್ತು ಎಂದರೆ ಸರಿಯಲ್ಲ. ನನ್ನ ತಾಯಿಯ ಅಭಿಪ್ರಾಯ ತಿಳಿದು ನಂತರ ನಾನು ವಿಲ್ ನಾಮೆ ಯನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

18. ನಮ್ಮ ಕುಟುಂಬಕ್ಕೆ ಸೇರಿದ ಒಂದು ಖಾಲಿ ನಿವೇಶನ ಶಿವಮೊಗ್ಗದಲ್ಲಿ ಇತ್ತು ಎಂದರೆ ನನಗೆ ಮಾಹಿತಿ ಇಲ್ಲ. ಕುಟುಂಬದ ಸದಸ್ಯರು ಆ ಆಸ್ತಿಯನ್ನು ಮಾರಾಟ ಮಾಡಿದ್ದರು ಎಂದರೆ ಗೊತ್ತಿಲ್ಲ. ಈ ನಿವೇಶನಕ್ಕೆ ಸಂಬಂಧಿಸಿದ ಕ್ರಯ ಪತ್ರಕ್ಕೆ ನಾನು ಒಪ್ಪಿಗೆ ಸಾಕ್ಷಿದಾರ ಎಂದು ಸಹಿ ಹಾಕಿರುತ್ತೇನೆ ಎಂದರೆ ಗೊತ್ತಿಲ್ಲ. ನನಗೆ ಈಗಲೂ ಕೂಡಾ ಸದರಿ ನಿವೇಶನ ಮತ್ತು ಅದಕ್ಕೆ ಸಂಬಂಧಿಸಿದ ಕ್ರಯದ ಬಗ್ಗೆ ಗೊತ್ತಿಲ್ಲ ಸದರಿ ನಿವೇಶನ ಮಾರಾಟವಾದ ವಿಷಯ ಗೊತ್ತಿದ್ದರೂ ಕೂಡಾ ನಾನು ಆ ಕುರಿತು ವಿಲ್ ನಾಮೆಯಲ್ಲಿ ಕಾಣಿಸಿದ್ದೇನೆ ಎಂದರೆ ಸರಿಯಲ್ಲ.

19. ನಮ್ಮ ತಂದೆ ಆನೇಪ್ಪ  ಮತ್ತು ಕುಟುಂಬದ ಸದಸ್ಯರು ಕೆಲವು ಆಸ್ತಿಗಳನ್ನು ಬ್ಯಾಂಕಿನಲ್ಲಿ ಠೇವಣಿ ಇಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮತ್ತು ಅರ್ಜಿದಾರರ ಸಂಬಂಧ 20 ವರ್ಷಗಳಿಂದ ಚೆನ್ನಾಗಿಲ್ಲ. ನನ್ನ ಮತ್ತು ಅರ್ಜಿದಾರರ ಮಧ್ಯೆ ಯಾವ ಕಾರಣಕ್ಕೆ ಸಂಬಂಧ ಕೆಟ್ಟಿದೆ ಎಂದು ಹೇಳಲಾಗುವುದಿಲ್ಲ. ನಮ್ಮ ತಂದೆ ತೀರಿಕೊಂಡ ನಂತರ ಹಾಗೂ ನನ್ನ ಇನ್ನೊಬ್ಬ ಅಣ್ಣ ಷಣ್ಮುಗಪ್ಪ ತೀರಿಕೊಂಡ ನಂತರ ಕುಟುಂಬದ ಜವಾಬ್ದಾರಿಯನ್ನು ಅರ್ಜಿದಾರರು ವಹಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ತೀರಿಕೊಂಡಾಗ ನನ್ನ ಮದುವೆ ಆಗಿರಲಿಲ್ಲ.  ನನ್ನ ಮದುವೆಯ ಎಲ್ಲಾ ಜವಾಬ್ದಾರಿಯನ್ನು ಅರ್ಜಿದಾರರು ತೆಗೆದುಕೊಂಡು ಎಲ್ಲಾ ಖರ್ಚು ವೆಚ್ಚ ವಹಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ನನ್ನ ತಾಯಿ ನನ್ನ ಮದುವೆ ಮಾಡಿರುತ್ತಾರೆ ಎಂದು ಹೇಳುತ್ತಾರೆ.

20. ನನ್ನ ಗಂಡನ ಹೆಸರು ಜಗದೀಶ ಇರುತ್ತದೆ.  ನನ್ನ ಗಂಡ ಬಾಪೂಜಿ ಇಂಜಿನಿಯರಿಂಗ್ ಕಾಲೇಜ್ ದಾವಣಗೆರೆಯಲ್ಲಿ ಉಪನ್ಯಾಸಕರಾಗಿರುತ್ತಾರೆ. ನನ್ನ ಮದುವೆ ಕಾಲಕ್ಕೆ ಅರ್ಜಿದಾರರು ನನ್ನ ಗಂಡನ ಹೆಸರಿಗೆ ಗೋಪಾಳಶೆಟ್ಟಿ ಗ್ರಾಮದಲ್ಲಿಯ 30 X 50 ಅಡಿ ಅಳತೆಯ ನಿವೇಶನವನ್ನು 2000-2001 ನೇ ಸಾಲಿನಲ್ಲಿ ಕೊಡಿಸಿದ್ದರು ಎಂದರೆ ಸರಿಯಲ್ಲ. ಸದರಿ ನಿವೇಶನ ನನ್ನ ಗಂಡನ ಹೆಸರಿಗೆ ಇದೆ.  ಅರ್ಜಿದಾರರು ಕೃಷಿ ಕೆಲಸದ ಜೊತೆಗೆ ಬಸ್ ಏಜೆನ್ಸಿ ಕೆಲಸ ಮಾಡುತ್ತಾರೆ ಎಂದರೆ ಸರಿ . ನನ್ನ ಅಣ್ಣ ಅಂದರೆ ಅರ್ಜಿದಾರರ  ಹೆಸರಿಗೆ 2 ಬಸ್ಸಿನ ಪರ್ ಮಿಟ್ ಗಳು ಕೂಡಾ ಇತ್ತು ಎಂದರೆ ಗೊತ್ತಿಲ್ಲ. ನನ್ನ ಮದುವೆ ಆದ ಕಾಲಕ್ಕೆ ನನ್ನ ಅಣ್ಣ 1 ಬಸ್ ಪರ್ ಮಿಟ್ ನ್ನು ನನ್ನ ಹೆಸರಿಗೆ ಮಾಡಿಸಿದ್ದರು ಎಂದರೆ ಸರಿಯಲ್ಲ.  ಬಸ್ ಪರ್ ಮಿಟ್ ನನ್ನ ಹೆಸರಿಗೆ ಇದ್ದ ಬಗ್ಗೆ ಮಾಹಿತಿ ಇಲ್ಲ.  ನನ್ನ ಹೆಸರಿಗೆ ಇದ್ದ ಬಸ್ ಪರ್ ಮಿಟ್ ನ್ನು ನಾನು ಬೇರೊಬ್ಬರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ.

20. ಅರ್ಜಿದಾರರು ಆಸ್ತಿಗಳಲ್ಲಿ ತಮ್ಮ ಹಿಸ್ಸೆ ಪಡೆಯಲು ನನ್ನ ಅಭ್ಯಂತರ ಇಲ್ಲ. ಅರ್ಜಿದಾರರು ನನ್ನ ಹಿಸ್ಸೆ ಪಡೆಯಲು ಯಾವುದೇ ತಕರಾರು ಮಾಡಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರು ಯಾವ ರೀತಿ ತಕರಾರು ಮಾಡುತ್ತಿದ್ದಾರೆಂದು ಹೇಳಲಾಗುವುದಿಲ್ಲ. ಅರ್ಜಿದಾರರು ತಮ್ಮ ಹಿಸ್ಸೆ ಪಡೆಯಲು ನಾನು ವಿನಾ ಕಾರಣ ತಕರಾರು ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ ಎದುರುದಾರ ನಂಃ 3, 4, 6 ಪರ ಶ್ರೀ ಎಸ್ ಕೆ ವಕೀಲರಿಂದ ,

21. 1 ನೇ ಎದುರುದಾರರು ಸಲ್ಲಿಸಿದ್ದ ಎಫ್ ಡಿ ಪಿ 6/2009 ಮತ್ತು ಎಫ್ ಡಿ ಪಿ 19/1998 ರಲ್ಲಿ ಆದ ಆದೇಶಗಳನ್ನು ಪ್ರಶ್ನಿಸಿ ನಾನು ಮೇಲ್ಮನವಿ ಸಲ್ಲಿಸಿಲ್ಲ. ಅಸಲು ದಾವೆ 65/89 ನ್ನು 1 ನೇ ಎದುರುದಾರರು ದಾಖಲಿಸುವ ಮೊದಲು ನನ್ನ ತಾಯಿ 1 ನೇ ಎದುರುದಾರರ ವಿರುದ್ಧ ಬೆಂಗಳೂರಿನ ನ್ಯಾಯಾಲಯದಲ್ಲಿ ಒಂದು ದಾವೆ ಹಾಕಿದ್ದರು ಎಂದರೆ ಮಾಹಿತಿ ಇಲ್ಲ. ಈ ಪ್ರಕರಣದಲ್ಲಿ ನ್ಯಾಯಾಲಯದ ನೋಟಿಸ್ ಬಂದ ನಂತರ ನಾನು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿರುತ್ತೇನೆ. ಅದೇ ರೀತಿ ನಾನು ಮುನಿಸಿಪಲ್ ಕಛೇರಿಗೆ ಹಾಗೂ ತಹಶೀಲ್ದಾರ ಕಛೇರಿಗೆ ತಕರಾರುಗಳನ್ನು ಕೊಡುತ್ತಾ ಬಂದಿರುತ್ತೇನೆ ಎಂದರೆ ಸರಿ .

22. ನಮ್ಮ ತಂದೆ ಜೀವಿತ ಕಾಲದಲ್ಲಿ ಮನೆ ವ್ಯವಹಾರವನ್ನು ನಮ್ಮ ತಂದೆ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿ ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ತಾಯಿ ಓದಿರಲಿಲ್ಲ. ನನ್ನ ತಾಯಿ ಮನೆಯ ಹಣಕಾಸಿನ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದರು. ನನ್ನ ತಂದೆ ಡೆಪ್ಯೂಟಿ ತಹಶೀಲ್ದಾರ ಆಗಿ ನಿವೃತ್ತಿ ಹೊಂದಿದ್ದರು ಎಂದರೆ ಸರಿ . ನನ್ನ ತಂದೆ ತಾಯಿಗೆ ನಾನು ಕೊನೆಯ ಮಗಳು ಎಂದರೆ ಸರಿ . ನನ್ನ ಎಲ್ಲಾ

ಅಕ್ಕಂದಿರ ಮದುವೆ ನಮ್ಮ ತಂದೆ ಜೀವಿತ ಕಾಲದಲ್ಲಿ ಆಗಿದೆ ಎಂದರೆ ಸರಿ . ನನ್ನ ತಂದೆಯ ಸೇವಾ ಸೌಲಭ್ಯಗಳು ನನ್ನ ತಾಯಿಯ ಖಾತೆಗೆ ಬಂದಿತ್ತು ಎಂದರೆ ನನಗೆ ಮಾಹಿತಿ ಇಲ್ಲ. ನನ್ನ ತಾಯಿ ಮಾಡುತ್ತಿದ್ದ ವ್ಯವಹಾರದ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ತಾಯಿ ಸ್ವತಂತ್ರವಾಗಿ ವ್ಯವಹಾರ ಮಾಡುವ ಸಾಮರ್ಥ್ಯ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೋಸ್ಕರ ನಾನು ನನ್ನ ತಾಯಿ ಮನೆ ವ್ಯವಹಾರ ಮತ್ತು ಹಣಕಾಸಿನ ವ್ಯವಹಾರ ನೋಡಿಕೊಳ್ಳುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.ನನ್ನ ತಾಯಿಗೆ ನ್ಯಾಯಾಲಯ ಎಷ್ಟು ಪಾಲು ಕೊಟ್ಟಿತ್ತು ಎಂದು ನನಗೆ ಮಾಹಿತಿ ಇಲ್ಲ. ನನ್ನ ತಾಯಿಯ ಪಾಲಿನ ಬಗ್ಗೆ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ. ಅಸಲು ದಾವೆ 65/89 ರ ಪ್ರಕಾರ ಯಾರಿಗೆ ಎಷ್ಟು ಪಾಲು ಬಂದಿತ್ತು ಎಂದು ನನಗೆ ಮಾಹಿತಿ ಇಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಈ ಕುರಿತು ನಾನು ಹೇಳಿಲ್ಲ. ಎಫ್ ಡಿ ಪಿ 6/2009 ಮತ್ತು ಎಫ್ ಡಿ ಪಿ 19/1998 ರಲ್ಲಿ ನಾನು ಮತ್ತು ಇತರರು ಪಕ್ಷಗಾರರಾಗಿದ್ದೆವು ಎಂದರೆ ಸರಿ . 1 ನೇ ಎದುರುದಾರರು ಬಹಳ ಹಿಂದೆಯೇ ತಮ್ಮ ಹಿಸ್ಸೆಯನ್ನು ಪಡೆದಿರುತ್ತಾರೆ ಎಂದರೆ ಮಾಹಿತಿ ಇಲ್ಲ. ಅಸಲು ದಾವೆ 65/89 ರ ಆದೇಶದ ಪ್ರಕಾರ ಯಾರು ಯಾರು ತಮ್ಮ ಹಿಸ್ಸೆಗಳನ್ನು ಯಾವಾಗ ಪಡೆದಿದ್ದಾರೆ ಎನ್ನುವ ಬಗ್ಗೆ ಮಾಹಿತಿ ಇಲ್ಲ. ಈ ಪ್ರಕರಣವನ್ನು ನನ್ನ ಅಣ್ಣ ರಮೇಶ ದಾಖಲಿಸಿರುತ್ತಾರೆ. ಈ ಪ್ರಕರಣದಲ್ಲಿ ನಾನು ನನ್ನ ವಕೀಲರ ಮುಖಾಂತರ ಪ್ರಕರಣ ನಡೆಸುತ್ತಿದ್ದೇನೆ.

23. ನಾನು ನನ್ನ ತಾಯಿಯ ಮನೆಯಲ್ಲಿ ಇರುವಾಗ ಯಾವುದೇ ಸ್ವಂತ ವ್ಯವಹಾರ ಮಾಡಿಲ್ಲ. ನನ್ನ ಗಂಡನ ಮನೆಗೆ ಹೋದಾಗಲೂ ಕೂಡಾ ನಾನು ಸ್ವತಂತ್ರವಾಗಿ ಯಾವುದೇ ವ್ಯವಹಾರ ಮಾಡುತ್ತಿಲ್ಲ ನಾನು ಗೃಹಿಣಿಯಾಗಿದ್ದೇನೆ.

ಹಂತದಲ್ಲಿ ಮುಂದುವರಿದ ಪಾಟಿ ಸವಾಲಿಗೆ ಮುಂದೂಡಲಾಯಿತು.

***(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ 18.10.2019 ರಂದು ಬೆರಳಚ್ಚು ಮಾಡಲಾಯಿತು)***

*ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.*

*ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು-ಎಎಂಎಸಿಟಿ-11,*
*ಭದ್ರಾವತಿ.*